ಶ್ರೀ ಹೆಚ್. ಜಿ. ಗೋವಿಂದೇಗೌಡ : ಸಭಾಧ್ಯಕ್ಷರೆ, ಮೊದಲನೆಯ ಪ್ರಶ್ನೆ ಸ್ನೇಹಿತರು ಕೇಳಿರತಕ್ಕಂಥದ್ದು ಗುಣಮಟ್ಟ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡತಕ್ಕಂತಹ ಮಕ್ಕಳಿಗೆ ಗುಣಮಟ್ಟದ ಅವಶ್ಯಕತೆ ಇಲ್ಲವೇ? ಪ್ರೌಢಶಾಲೆಯಲ್ಲಿ ಮಾತ್ರ ಇರಬೇಕೇ ಎಂದು ಕೇಳಿದ್ದಾರೆ. ಒಂದು ಲಕ್ಷದ ಹತ್ತುಸಾವಿರ ಟಿ.ಸಿ.ಹೆಚ್. ಆಗಿರತಕ್ಕಂತಹ ಪದವೀಧರರು ಈ ರಾಜ್ಯದಲ್ಲಿದ್ದಾರೆ. ಅವರಿಗೆ ಕೆಲಸಗಳನ್ನು ಒದಗಿಸತಕ್ಕಂತಹ ಜವಾಬ್ದಾರಿ ನಮಗೆ ಇದೆ, ಯಾವುದೇ ಸರ್ಕಾರ ಇದ್ದರೂ ಆ ಜವಾಬ್ದಾರಿಯನ್ನು ವಹಿಸಬೇಕಾಗುತ್ತದೆ. ಈ ದೃಷ್ಟಿಯಿಂದ 29 ವರ್ಷಕ್ಕೆ ಮೇಲ್ಪಟ್ಟವರಿಗೆ ಒಂದು ಅವಕಾಶ ನಮ್ಮ ಸರ್ಕಾರ ಮಾಡಿ ಕೊಟ್ಟಿರತಕ್ಕಂಥದ್ದು ಅಲ್ಲ, ಹಲವಾರು ವರ್ಷಗಳಿಂದ ಈ ವ್ಯವಸ್ಥೆ ಮುಂದುವರೆದುಕೊಂಡು ಬಂದಿದೆ. ಇದು ಸಾಮಾನ್ಯವಾಗಿ ವಿದ್ಯಾಭ್ಯಾಸ ಮಾಡಿ 4-5 ವರ್ಷ ಶಾಲೆಗಳಲ್ಲಿ ಅವಕಾಶ ಇಲ್ಲದೆ ಇರತಕ್ಕಂಥಹ ಉಪಾಧ್ಯಾಯರಿಗೆ ಈ ಅವಕಾಶವನ್ನು ಕಲ್ಪಿಸಬೇಕೆಂಬ ಒಂದೇ ಒಂದು ಮಾನವೀಯತೆಯ ದೃಷ್ಟಿಯಲ್ಲಿ 29 ವರ್ಷಕ್ಕೆ ಮೇಲ್ಪಟ್ಟವನ್ನು ನೇಮಕ ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡಿದೆ. 18,700 ಉಪಾಧ್ಯಾಯರನ್ನು ನೇಮಕ ಮಾಡತಕ್ಕಂತಹ ಪ್ರಕ್ರಿಯೆ ನಡೆಯುತ್ತಿದೆ. ಈಗಾಗಲೇ 9,350 ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ. ಇವರು 9,350 ಉಪಾಧ್ಯಾಯರು 29 ವರ್ಷಕ್ಕೆ ಮೇಲ್ಪಟ್ಟವರು ಇನ್ನು ಬಾಕಿ ಉಳಿದಿರತಕ್ಕಂಥವರು 18 ವರ್ಷ ಮೇಲ್ಪಟ್ಟವರು. ಖಾಸಗಿ ಪಾಠ ಶಾಲೆಗಳಲ್ಲೂ ಸಹ ಖಾಸಗಿ ಪಾಠಶಾಲೆಗಳಲ್ಲಿ ಪ್ರಾಥಮಿಕ ಪಾಠ ಶಾಲೆಗಳಲ್ಲಿ ನಡೆಯತಕ್ಕಂತಹ ಯಾವುದೇ ಖಾಸಗಿ ಪಾಠ ಶಾಲೆಯವರು ಹೈಸ್ಕೂಲನಲ್ಲಿ ನಡೆಸತಕ್ಕಂತಹ ಸಂದರ್ಭದಲ್ಲಿ ಅವರಿಗೆ ಪ್ರಮೋಷನ್ ಕೊಡುವುದಕ್ಕೆ ಅವಕಾಶ ಉಂಟು. ಯಾರು ಸೀನಿಯಾರಿಟಿನಲ್ಲಿ ಇರುತ್ತಾರೆ, ಬಿಎಡ್ ಮಾಡಿರುವಂತಹವರು, ಅಥವಾ ಪದವೀಧರರು ಯಾರು ಇರುತ್ತಾರೆ, ಅವರನ್ನು ಪ್ರಮೋಷನ್ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಉಂಟು. ಅಂತಹ ಹೈಸ್ಕೂಲಗಳಿಗೆ ಪ್ರಮೋಷನ್ ಮಾಡುವುದಕ್ಕೆ ಯಾವುದೇ ತೊಂದರೆ ಇಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಸೀನಿಯರಿಟಿ ಮೇಲೆ ಬಡ್ತಿ ನೀಡುವುದರಲ್ಲಿ ಅವ್ಯವಹಾರ ನಡೆದಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅದನ್ನು ಕಟ್ಟುನಿಟ್ಟಾದ ಪಾಲಿಸುವುದಕ್ಕೆ ನೀವು ಏನಾದರೂ ಕ್ರಮ ತೆಗೆದುಕೊಂಡಿದ್ದೀರೋ ಹೇಗೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ : ನಿಗದಿತವಾಗಿ ಯಾವುದಾದರೂ ಶಾಲೆಯಲ್ಲಿ ಈ ರೀತಿಯ ವ್ಯವಸ್ಥೆ ಮಾಡಲಿಲ್ಲ ಎಂದರೆ ದಯವಿಟ್ಟು ನಮ್ಮ ಗಮನಕ್ಕೆ ತನ್ನಿ, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಅದಕ್ಕೆ ವ್ಯವಸ್ಥೆ ಮಾಡುತ್ತಾರೆ.

ಅನುದಾನಿತ ಖಾಸಗಿ ಶಿಶುವಿಹಾರದ ಶಿಕ್ಷಕರ ವೇತನ ಹಾಗೂ ನಿವೃತ್ತಿ ವೇತನ.

81 - ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಅನುದಾನಿಕ ಖಾಸಗಿ ಶಿಶುವಿಹಾರ ಶಾಲೆಗಳಿವೆ?

ಆ) ಈ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು ?

ಇ) ಈ ಶಿಕ್ಷಕರುಗಳಿಗೆ ಶಿಕ್ಷಕರ ಹುದ್ದೆಗನುಗುಣವಾಗಿ ವೇತನ ಹಾಗೂ ನಿವೃತ್ತಿವೇತನ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಆ) 370

ಆ) 575.

ಇ) ಬಂದಿದೆ.

ಈ) ಪೂರ್ಣವೇತನ ಹಾಗೂ ನಿವೃತ್ತಿ ವೇತನ ನೀಡುವ ಬಗ್ಗೆ ಇಲಾಖೆ ಸಲ್ಲಿಸಿದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ರಾಮದಾಸ್ (ಶ್ರೀ ಬಿ.ಎಸ್. ಯಡಿಯೂರಪ್ಪನವರ ಪರವಾಗಿ) : ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಕೊಟ್ಟಂತಹ ಉತ್ತರದಲ್ಲಿ ಇದು ಸರ್ಕಾರದ ಗಮನಕ್ಕೆ ಬಂದಿದೆ, ಪೂರ್ಣವೇತನ ಕೊಡುವಂತಹ ವಿಚಾರದಲ್ಲಿ ಪರಿಶೀಲನೆಯಲ್ಲಿದೆ. ಅನ್ನುವಂತಹ ವಿಚಾರವನ್ನು ಹೇಳಿದ್ದಾರೆ. ಆದರೆ ಮತ್ತೊಂದು ವಿಚಾರವನ್ನು ಸನ್ಮಾನ್ಯ ಮಂತ್ರಿಗಳಿಗೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಸರ್ಕಾರದ ಗಮನಕ್ಕೆ ಈ ವಿಚಾರ ಯಾವಾಗ ಬಂದಿತು, ಜೊತೆಗೆ ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ, ಆದರೆ ಇದರ ಹಿಂದೆ ಈಗಾಗಲೇ ಸರ್ಕಾರಿ ಆಜ್ಞೆ ಪೂರ್ಣವೇತನ ಮತ್ತು ಪೆನಷನ ಕೊಡುವ ಬಗ್ಗೆ ಸರ್ಕಾರೀ ಆಜ್ಞೆ ಆಗಿದೆಯಾ ? ಇವರು ಕೆ.ಸಿ. ಎಸ್.ಆರ್. ರೂಲಿಗೆ ಒಳಪಡುತ್ತಾರಾ ಎನ್ನುವಂತಹ ವಿಚಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಪೂರ್ವ ಪ್ರಾಥಮಿಕ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಹೇಳಿಕೊಡತಕ್ಕಂತಹ ಉಪಾಧ್ಯಾಯರು ಏನಿದ್ದಾರೆ ಅವರಿಗೆ ಸಂಪೂರ್ಣವಾಗಿ ಹಣ ಸರ್ಕಾರದವರು ಕೊಡುತ್ತಿಲ್ಲ. 50 ಭಾಗ, 25 ಭಾಗ, ಮತ್ತು 75 ಭಾಗದ ರೂಪದಲ್ಲಿ ಬಹಳ ವರ್ಷಗಳಿಂದ ಕೊಟ್ಟು ಅವರನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದರಲ್ಲಿ ತೊಂದರೆಗಳು ಆಗಿರತಕ್ಕಂಥದ್ದು ಗೊತ್ತಿದೆ. ಇವರು ಪೂರ್ಣಕಾಲಿಕ ಉಪಾಧ್ಯಾಯರುಗಳು ಅಲ್ಲದೆ ಇರುವುದರಿಂದ ನಾವು ಇತ್ತೀಚೆಗೆ ಅದರ ಬಗ್ಗೆ ಯೋಚನೆ ಮಾಡಿ ಇವರಿಗೆ ಯಾವುದಾದರೂ ಒಂದು ರೀತಿಯಲ್ಲಿ ವೇತನದ ವ್ಯವಸ್ಥೆ ಮಾಡಬೇಕೆಂದು ಹೇಳಿ ಸರ್ಕಾರದ ಪರಿಶೀಲನೆಯಲ್ಲಿದೆ. ಕೆಲವು ಕಡೆ ಅಲ್ಲಲ್ಲಿ ಅಂಗನವಾಡಿಗಳು ಇವೆ. ಪೂರ್ವ ಪ್ರಾಥಮಿಕ ಪಾಠಶಾಲೆಗಳಲ್ಲಿ ಇವರುಗಳ ಅಗತ್ಯತೆ ಇದೆಯೋ ಎಂಬ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ಪೂರ್ವ ಪ್ರಾಥಮಿಕ ಪಾಠ ಶಾಲೆಗಳಲ್ಲಿ ಯಾವುದೇ ಪೌಷ್ಟಿಕ ಆಹಾರವನ್ನು ನಾವು ಕೊಡುತ್ತಿಲ್ಲ. ಅದೇ ಅಂಗನವಾಡಿಗಳಲ್ಲಿ ಪೌಷ್ಟಿಕ

ಆಹಾರವನ್ನು ಒದಗಿಸತಕ್ಕಂತಹ ವ್ಯವಸ್ಥೆ ಇದೆ. ಈ ಬಗ್ಗೆ ಯೋಚನೆ ಮಾಡಿ ಪೂರ್ವ ಪ್ರಾಥಮಿಕ ಪಾಠಶಾಲೆಗಳಲ್ಲಿ ವಿಧ್ಯಾಭ್ಯಾಸ ಮಾಡತಕ್ಕಂತಹ ಮಕ್ಕಳನ್ನು ಅಂಗನವಾಡಿ ಶಾಲೆಗಳಲ್ಲಿ ಸೇರಿಸತಕ್ಕಂಥಹ ಬಗ್ಗೆ ನಾವು ಸರ್ಕಾರದಲ್ಲಿ ಯೋಚನೆ ಮಾಡುತ್ತಿದ್ದೇವೆ. ಆ ಉಪಾಧ್ಯಾಯರನ್ನು ಸಹ ಪ್ರಾಥಮಿಕ ಪಾಠ ಶಾಲೆಗಳಲ್ಲಿ ವಿಧ್ಯಾಭ್ಯಾಸ ಹೇಳಿ ಕೊಡುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಚಿಂತನೆ ಮಾಡುತ್ತಿದ್ದೇವೆ. ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎ. ರಾಮದಾಸ್ : ಈ ವಿಚಾರದಲ್ಲಿ ನಾನು ಕೇಳಿದಂತಹ ಪ್ರಶ್ನೆಗೆ ಉತ್ತರ ಬರಲಿಲ್ಲ. ಇದು ಸರ್ಕಾರದ ಗಮನಕ್ಕೆ ಯಾವಾಗ ಬಂದಿತು, ಎರಡನೆಯದಾಗಿ ನಾನು ಕೇಳಿದ್ದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಹೇಳಿದಿರಿ, ಆದರೆ ಸರ್ಕಾರದಲ್ಲಿ ಈಗಾಗಲೇ ಅವರೆಲ್ಲರಿಗೂ ಕೂಡ ಪೆನಷನ್ ಮತ್ತು ಪೂರ್ಣವೇತನ ಕೊಡಬೇಕೆಂದು 1960ನೇ ಇಸವಿಯಲ್ಲಿ ಆಗಿರತಕ್ಕ ಸರ್ಕಾರ ಆಜ್ಞೆಯೂ ಕೂಡ ನಮ್ಮಲ್ಲಿ ಇದೆ. ಇದರ ಬಗ್ಗೆ ನಿಮಗೆ ಮಾಹಿತಿ ಹೇಳುತ್ತಿದ್ದೇನೆ, ಮತ್ತೆ ಪರಿಶೀಲನೆ ಅಗತ್ಯವೇನಿದೆ? ಜೊತೆಗೆ ಪೆನಷನ್‌ನ್ನು ಈಗಾಗಲೇ ಬೇರೆಯವರಿಗೆ ಕೊಡಲಾಗಿದೆಯೇ ಎಂದು ಕೇಳಿದ್ದೇನೆ. ಅದರ ಬಗ್ಗೆ ಬೇರೆ ಏನೂ ಉತ್ತರ ಕೊಡಲಿಲ್ಲ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಪ್ರಶ್ನೆ ಕೇಳಿರತಕ್ಕಂಥದ್ದು, ಅದಕ್ಕೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇವೆ. ಇದೆಲ್ಲಾ ಇರುವಾಗ ಇವರನ್ನು ಯಾವುದಾದರೂ ಮಧ್ಯದಲ್ಲಿ ಬಿಡುವುದಕ್ಕಿಂತ ನಾವು ಇಲಾಖೆಗೆ ತೆಗೆದುಕೊಂಡು ಡೂಪ್ಲಿಕೇಟ್ ಆಗತಕ್ಕದ್ದನ್ನು ತಪ್ಪಿಸಲು ಅಂಗನವಾಡಿ ಶಾಲೆಗೆ ಅವರನ್ನು ಸೇರಿಸೋಣ. ಈ ಉಪಾಧ್ಯಾಯರುಗಳನ್ನು ಸರ್ಕಾರ ಉಪಾಧ್ಯಾಯರುಗಳಾಗಿ ನೇಮಕ ಮಾಡತಕ್ಕಂತಹ ವ್ಯವಸ್ಥೆ ಬಗ್ಗೆ ಚಿಂತನೆ ಮಾಡುತ್ತಿದ್ದೇನೆ. ಅದರ ಬಗ್ಗೆಯೇ ಯೋಚನೆ ಮಾಡುತ್ತಿದ್ದೇವೆ ಎಂದು ತಮಗೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಈ ಫ್ರೀ ಪ್ರೈಮರಿ ಸ್ಕೂಲ್ಸ್ ಎಂದು ಏನು ಪ್ರಾರಂಭ ಮಾಡಿದ್ದಾರೆ ಅದು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಾಗಿ ಇದೆ ಹಳೆ ಮೈಸೂರಿನಲ್ಲಿ ಇದಕ್ಕೆ ಫುಲ್ ಗ್ರಾಂಟ್ ಇದೆ. ಬಾಂಬೆ ಕರ್ನಾಟಕದಲ್ಲಿ ಇದಕ್ಕೆ ಗ್ರಾಂಟ್ ಇಲ್ಲ. ಹೈದರಾಬಾದ್ ಕರ್ನಾಟಕದಲ್ಲಿ ಇದಕ್ಕೆ ಗ್ರಾಂಟ್ ಇಲ್ಲ, ಇವತ್ತು ಅವರಿಗೆ ಗೊತ್ತಿದೆ ಅಲ್ಲಿಯೂ ಕೂಡ ಕೆಲವು ಪ್ರೀಪ್ರೈಮರಿ ಸ್ಕೂಲ್ಸ್ ನಡೆದಿದೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಅವರನ್ನು ಕೋರಿಕೊಳ್ಳುವುದು ಇಷ್ಟೇ, ಈಗಾಗಲೇ ಅಂಗನವಾಡಿ ಸ್ಕೀಮ್ ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿದೆ. ಅದಕ್ಕೆ ಈ ಎಲ್ಲಾ ಶಿಕ್ಷಕರನ್ನು ತಾವು ಅಬ್ಸಾರ್ಬ್ ಮಾಡಿಕೊಂಡು ಈ ಪ್ರೀಪ್ರೈಮರಿ ಸ್ಕೂಲ್ಸ್ ತೆಗೆದುಕೊಂಡು ಯಾವ ರೀತಿಯಾಗಿ ಅಂಗನವಾಡಿಯವರಿಗೆ ಸಹಾಯ ಮಾಡುತ್ತಿದ್ದೀರಿ, ಅದೇ ರೀತಿಯಾಗಿ ಇವರಿಗೂ ಕೂಡ ಫುಲ್ ಸ್ಯಾಲರಿ ಕೊಟ್ಟು ಇಲ್ಲವಾದರೆ 100 ಪರ್ಸೆಂಟ್ ಗ್ರಾಂಟ್ ಕೊಟ್ಟು ಯೂನಿಫಾರಂ ಕೋಡ್ ಮಾಡಿ. ಬಾಂಬೆ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಹಳೇ ಮೈಸೂರು ಆಲ್ ಓವರ್ ಕರ್ನಾಟಕ ಒಂದೇ ಯೂನಿಫಾರಂ ಕೋಡ್ ಜಾರಿಗೆ ತನ್ನಿ. ಏಕೆಂದರೆ ಇಲ್ಲಿ ಒಂದು ರೀತಿಯಾಗಿ ಕೊಡುತ್ತೀರಿ, ಅಲ್ಲಿ ಒಂದು ರೀತಿಯಾಗಿ

ಕೊಡುತ್ತೀರಿ, ಹೀಗಿರುವಾಗ ಇವತ್ತಿನ ದಿವಸ ಈ ಗ್ರಾಂಟ್ ಇನ್ ಎಡ್ ಕೋಡ್ ಏನಿದೆ ಅದರಲ್ಲಿ ವ್ಯತ್ಯಾಸ ಇದೆ. ದಯವಿಟ್ಟು ಅದನ್ನು ಸರಿಪಡಿಸುತ್ತೀರೋ ಹೇಗೆ, ಇಲ್ಲ ಅಂದರೆ ಇವರಿಗೆ ಅಟಲೀಸ್ಟ್ 575 ಜನರಿಗೆ ಅಬಸಾಬ್ ಮಾಡಿಕೊಂಡು ಸರ್ಕಾರೀ ನೌಕರರಂತೆ ಟ್ರೀಟ್ ಮಾಡಿ. ಈ ನಿಮ್ಮ ಪೆನಷನ್ ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೀರೋ ಹೇಗೆ?

11.20 ಪಿ.ಎಂ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಈ ಪ್ರಶ್ನೆಗೆ ನಾನು ಉತ್ತರ ಕೊಟ್ಟಿರುವುದು. ಇವೊತ್ತು ಎಲ್ಲಿ ಪ್ರೀ ಪ್ರೈಮರಿನಲ್ಲಿ ವಿದ್ಯಾಭ್ಯಾಸ ಹೇಳಿಕೊಡುತ್ತಿರುವ ಉಪಾಧ್ಯಾಯರುಗಳ ಡೂಪ್ಲಿಕೇಟ್ ಆಗುತ್ತಿದೆ, ಅಲ್ಲಿ ಅಂಗನವಾಡಿನಲ್ಲೂ ಅದೇ ಹೇಳುತ್ತಿದ್ದಾರೆ ಇಲ್ಲೂ ಅದೇ ಹೇಳುತ್ತಿದ್ದಾರೆ. ಅವರನ್ನು ನಾವು ಪ್ರೈಮರಿ ಶಾಲೆಗೆ ಸೇರಿಸಿಕೊಳ್ಳತಕ್ಕಂಥದ್ದು ಮತ್ತು ಅವರಿಗೆ ಸಂಬಳವನ್ನು ಕೊಡತಕ್ಕಂಥದ್ದರ ಬಗ್ಗೆ ಎರಡು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈಗಾಗಲೇ ವರ್ಕೌಟ್ ಆಗಿದೆ. ಇದರ ಬಗ್ಗೆ ಚಿಂತನೆ ಮಾಡಿಕೊಂಡು ತಾವು ಏನು ಅಭಿಪ್ರಾಯ ಹೇಳಿದ್ದೀರಿ, ನನ್ನ ಅಭಿಪ್ರಾಯವೇ, ನಿಮ್ಮ ಅಭಿಪ್ರಾಯ, ನಿಮ್ಮ ಅಭಿಪ್ರಾಯವೇ ನಮ್ಮ ಅಭಿಪ್ರಾಯ. ಇದರ ಬಗ್ಗೆ ಅಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡತಕ್ಕಂಥವರನ್ನು ಸರ್ಕಾರಕ್ಕೆ ತೆಗೆದುಕೊಂಡು ಇಲ್ಲಿ ಇರತಕ್ಕಂಥ ಮಕ್ಕಳನ್ನು ಅಂಗನವಾಡಿಗೆ ಕಳುಹಿಸತಕ್ಕಂಥದ್ದು, ಒಟ್ಟಾರೆ ರಾಜ್ಯದಲ್ಲಿ ಸಮಗ್ರವಾದ ಒಂದು ವ್ಯವಸ್ಥೆ ಆಗಬೇಕೆಂದು ಇಲ್ಲಿ ಯೋಚನೆ ಮಾಡುತ್ತಿದ್ದೇವೆಯೇ ಹೊರತು ಇನ್ನೇನಿಲ್ಲ.

ಶ್ರೀ ಎ. ರಾಮದಾಸ್ : ಏತಕ್ಕೆ ಈ ವಿಚಾರ ಕೇಳುತ್ತಿದ್ದೇನೆಂದರೆ 1960ನೇ ಇಸವಿಯಲ್ಲಿ ಇದರ ಬಗ್ಗೆ ಆರ್ಡರ್ ಆಗಿದ್ದರೂ ಕೂಡ ಅವೊತ್ತಿಂದ ಇವೊತ್ತಿನವರೆಗೆ ರಿಟೈರ್ಡ್ ಆಗಿರುವಂಥ ವ್ಯಕ್ತಿಗಳಿಗೆ ಯಾವುದೇ ರೀತಿಯ ಸೌಲಭ್ಯ ಸಿಕ್ಕಿಲ್ಲ. ಆದರೆ ಕೆಲವು ವ್ಯಕ್ತಿಗಳಿಗೆ ಈಗಾಗಲೇ ಪೆನ್‌ಷನ್ ದೊರೆಯುತ್ತಿದೆ. ಪೆನಷನ್ ದೊರೆಯುತ್ತಿರುವ ದಾಖಲಾತಿಗಳು ಕೂಡ ಇವೆ. ಈ ರೀತಿಯಾದ ತಾರತಮ್ಯ ಏಕೆ? ಈ ತಾರತಮ್ಯ ಹೋಗಲಾಡಿಸಿ ಈಗಾಗಲೇ ರಿಟೈರ್ಡ್ ಒಂದೇ ರೀತಿಯ ನಿಯಮವನ್ನು ಅಪ್ಲೈ ಮಾಡಿ ಸರ್ಕಾರ ಅವರಿಗೆ ಪೆನಷನ್ ಕೊಡಲಿಕ್ಕೆ ಸಿದ್ಧವಾಗಿದೆಯೇ ಎನ್ನುವ ವಿಚಾರ ಬೇಕು.

ಅಧ್ಯಕ್ಷರು : ತಾರತಮ್ಯ ಇದ್ದರೆ ಸರಿಪಡಿಸಿ. ಅವರ ವಿಚಾರದಲ್ಲಿ ನಮಗೆಲ್ಲರಿಗೂ ವಿಶ್ವಾಸ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾನು ಕೇಳಿದೆ ಗ್ರಾಂಟ್ ಇನ್ ಎಡಅಮೆಂಡ್ ಮಾಡುತ್ತೀರೋ ಹೇಗೆ ಯುನಿಫಾರ್ಮಾಗಿ ಎಂದು. It is very serious. Unless we amend the Grant-in-Aid. ಅವಾಗ ಇದು ಸಾಧ್ಯ ಇದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಇದು ಗ್ರಾಂಟ್ ಇನ್ ಕೋಡ್ ಅಮೆಂಡ್ ಮಾಡಿ

ಮಾಡಬೇಕಾಗಿರತಕ್ಕಂಥದ್ದು. ಕೂಡಲೇ ಮಾಡಿ ಎಂದರೆ ಮಾಡುವುದಕ್ಕಾಗುವುದಿಲ್ಲ. ಇದನ್ನು ನಾವು ಹೊಸ ಸರ್ಕಾರ ಬಂದ ಮೇಲೆ ಯೋಚನೆ ಮಾಡಿದ್ದೇವೆ ನಾವು. ಡೂಪ್ಲಿಕೇಟ್ ಬೇಕಾಗಿರತಕ್ಕಂಥದ್ದಿಲ್ಲ, ಅಲ್ಲಿ ಅಂಗನವಾಡಿನಲ್ಲಿ ಇದ್ದಾರೆ, ಮಕ್ಕಳು ಇಲ್ಲೂ ಇದ್ದಾರೆ.

MR. SPEAKER : The object is as simple as this. If there are anomalies in existence, the Government has a duty and obligation to rectify all the anomalies and you should undertake the responsibility.

SRI H.G. GOVINDE GOWDA : That is correct.

ಶ್ರೀ ಐ.ಎಂ. ಜಯರಾಮ ಶೆಟ್ಟಿ : ಮಾನ್ಯ ಸಭಾಧ್ಯಕ್ಷರೇ, ಇದರಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳೂ ಸಹ ಇಲ್ಲಿ ನೋಡುವಂಥ ಬಹಳ ದುಃಖದ ವಿಷಯ ಏನೆಂದರೆ ನರ್ಸರಿ ಮಕ್ಕಳಿಗೆ ಮಧ್ಯಾಹ್ನ ಊಟ ಕೊಡುತ್ತಾರೆ, ಪ್ರೈಮರಿ ಮಕ್ಕಳಿಗೆ ಊಟ ಇದೆ. ಈ ಪ್ರೀ ಪ್ರೈಮರಿ ಮಕ್ಕಳಿಗೆ ಇವ್ಮೊತ್ತು ಊಟ ಇಲ್ಲದಂಥ ವ್ಯವಸ್ಥೆ ನಮ್ಮಹೆಚ್ಚಿನ ಖಾಸಗಿ ಶಾಲೆಯಲ್ಲಿ ನಡೆಯುತ್ತಿದೆ. ಈ ಪ್ರಸಂಗವನ್ನು ನಾವು ಕಣ್ಣಾರೆ ನೋಡುವುದು ಕಷ್ಟದ ಪರಿಸ್ಥಿತಿ. ಸರ್ಕಾರದಿಂದ ದೊರೆಯುವಂಥ ಈ ಸವಲತ್ತನ್ನು ಈ ಮಕ್ಕಳಿಗೂ ಕೂಡ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ವಿದ್ಯಾಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ದಾನಿಗಳನ್ನು ಹಿಡಿದುಕೊಂಡು ಅಲ್ಲಲ್ಲಿ ವ್ಯವಸ್ಥೆ ಮಾಡಿ. ಅವರು ಒಳ್ಳೆಯ ದಾನಿಗಳೆಂದು ಹೆಸರು ಇದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಧ್ಯಾಹ್ನದ ಉಪಹಾರದ ವಿಷಯದ ಬಗ್ಗೆ ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಕೊಡತಕ್ಕಂಥದ್ದರ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತಿದ್ದೇವೆ. ಈಗಾಗಲೇ ಪ್ರೈಮರಿ ಸ್ಕೂಲ್ ಮಕ್ಕಳಿಗೆ ಯಾವುದೇ ರೀತಿಯ ತೊಂದೆರ ಆಗದ ಹಾಗೆ ಅವರಿಗೆ ಫುಡ್ ಕೊಡುತ್ತಿದ್ದೇವೆ. ಎಲ್ಲಾ ಮಕ್ಕಳಿಗೆ ಮಧ್ಯಾಹ್ನ ಒಂದು ಕೆ.ಜಿ. ಒಂದು ತಿಂಗಳು ಒಂದು ಮಗುವಿಗೆ ಕೊಡುತ್ತಿದ್ದೇವೆ. ಇನ್ನು ಮೂರು ಕೆ.ಜಿ. ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಗೋಧಿ ಏನು ಇದೆ ಅದನ್ನು ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಎಲ್ಲಾ ಮಕ್ಕಳಿಗೆ ಕೊಡುತ್ತಿದ್ದೇವೆ. ಮಧ್ಯಾಹ್ನದ ಉಪಹಾರದ ವ್ಯವಸ್ಥೆ ಮಾಡಬೇಕೆಂದು ಈಗಾಗಲೇ ಯೋಚನೆ ಮಾಡುತ್ತಿದ್ದೇವೆ. ಒಂದು ವೇಳೆ ಉಪಹಾರದ ವ್ಯವಸ್ಥೆ ಆಗದಿದ್ದರೆ ಈ ಮೂರು ಕೆ.ಜಿ. ಅಕ್ಕಿ, ಗೋಧಿ ಏನು ಇದೆ ಅದನ್ನು ಕಂಟಿನ್ಯೂ ಮಾಡುತ್ತೇವೆ. ಒಟ್ಟಾರೆ ಪ್ರೈಮರಿ ಸ್ಕೂಲ್ ಮಕ್ಕಳಿಗೆ ತೊಂದರೆ ಆಗದ ಹಾಗೆ ನೋಡಿಕೊಳ್ಳುತ್ತೇವೆ.

ಅಧ್ಯಕ್ಷರು : ರಾಜೇಂದ್ರನ್‌ರವರೇ, ಇವ್ಮೊತ್ತು ಹೈಯರು ಎಜುಕೇಷನ್ ಮಿನಿಸ್ಟರ್ ಮಂಗಳೂರು ಯುನಿವರ್ಸಿಟಿಗೆ ಕಾನ್ವೋಕೇಷನ್ ಹೋಗಬೇಕೆಂದು ನನ್ನ ಅನುಮತಿಯನ್ನು ಪಡೆದುಕೊಂಡು ಹೋಗಿದ್ದಾರೆ. ಆದಕಾರಣ ತಮ್ಮ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳೋಣ.

Sri S. RAJENDRAN : Can I explain to you, our feelings so that..

MR. SPEAKER : There is no opportunity under our rules. When the Minister for Higher Education is present in the House. We will take up this Questions.

SRI S. RAJENDRAN : To prepare this, I have taken two days.

MR. SPEARKER : I am here to protect your interest.

SRI S. RAJANEDRAN : This is the way, they are ignoring K.G.F.

MR. SPEAKER : No, K.G.F. will not be ignored. Mr. Rajendran will not be ignored. You are on top in my priority.

ಸಕಲೇಶಪುರ ಮತ್ತು ಆಲೂರು ಕ್ಷೇತ್ರದಲ್ಲಿ ಶಾಲೆಗಳು ಮತ್ತು ಜೂನಿಯರ್ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳು.

83 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಮತ್ತು ಆಲೂರು ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರಾಥಮಿಕ ಶಾಲೆಗಳು, ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ (ಪ್ರತ್ಯೇಕವಾರು ನೀಡುವುದು)

ಆ) ಈ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಒಟ್ಟು ಎಷ್ಟು ಜನ ಅಧ್ಯಾಪಕರುಗಳಿದ್ದಾರೆ? ಎಷ್ಟು ಜನ ಅಧ್ಯಾಪಕರುಗಳು ಇರಬೇಕಿತ್ತು? (ಅಂಕಿ ಅಂಶಗಳನ್ನು ನೀಡುವುದು)

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ)

	ಪ್ರಾಥಮಿಕ ಶಾಲೆ	ಪ್ರೌಢ ಶಾಲೆ	ಪ.ಪೂ.ಕಾ
ಸಕಲೇಶಪುರ	167	07	03
ಆಲೂರು	165	07	02